ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**S.C No.: 18/2017**

ಹನುಮಸಾಗರ ಪೊಲೀಸ ಠಾಣೆ ಃ ವಿರುದ್ಧ ಃ ಈರಪ್ಪ ಮತ್ತು ಇತರರು

ಆರೋಪಿ-1 : ಈರಪ್ಪ ತಂದೆ ರಾಮಚಂದ್ರಪ್ಪ ಜವಳಿ, ವಯಾಃ 38 ವರ್ಷ, ಉದ್ಯೋಗಃ ಒಕ್ಕಲುತನ, ಸಾಃ ಗುಡ್ಡದ ದೇವಲಾಪುರ, ತಾಃ ಕುಷ್ಟಗಿ, ಜಿಃ ಕೊಪ್ಪಳ.

2 : ರಾಮಚಂದ್ರಪ್ಪ ತಂದೆ ಈರಪ್ಪ ಜವಳಿ, ಉದ್ಯೋಗಃ ಒಕ್ಕಲುತನ, ಸಾಃ ಗುಡ್ಡದ ದೇವಲಾಪುರ, ತಾಃ ಕುಷ್ಟಗಿ, ಜಿಃ ಕೊಪ್ಪಳ.

3 : ಶರಣಮ್ಮ ಗಂಡ ರಾಮಚಂದ್ರಪ್ಪ ಜವಳಿ, ಉದ್ಯೋಗಃ ಒಕ್ಕಲುತನ, ಸಾಃ ಗುಡ್ಡದ ದೇವಲಾಪುರ, ತಾಃ ಕುಷ್ಟಗಿ, ಜಿಃ ಕೊಪ್ಪಳ.

4 : ಅನಸೂಯ ಗಂಡ ಅಮರೇಶ ಕಂಟಿ, ಉದ್ಯೋಗಃ ಒಕ್ಕಲುತನ, ಸಾಃ ಗುಡ್ಡದ ದೇವಲಾಪುರ, ತಾಃ ಕುಷ್ಟಗಿ, ಜಿಃ ಕೊಪ್ಪಳ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ

ಪ್ರಶ್ನೆ-1 : ಈ ಕೇಸಿನಲ್ಲಿ ಅಭಿಯೋಜನಾ ಸಾಕ್ಷಿದಾರರು ನೀಡಿರುವ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರ : 1 ರಿಂದ 4

ಪ್ರಶ್ನೆ-2 : ಮದುವೆಯಾದ 7-8 ವರ್ಷಗಳವರೆಗೆ ನೀವುಗಳು ದೂರುದಾರರಾದ ಬಸವಣ್ಣೆವ್ವ ಈಕೆಯನ್ನು ಚೆನ್ನಾಗಿ ನೋಡಿಕೊಂಡಿದ್ದು ನಂತರ ವರದಕ್ಷಿಣೆ ಮತ್ತು ಬಂಗಾರ ತಂದಿರುವುದಿಲ್ಲ ಎಂದು ನೀವುಗಳು ಆಕೆಗೆ ಕಿರುಕುಳ ಕೊಡಲು ಪ್ರಾರಂಭಿಸಿದ್ದು, ರೂ.50,000/- ವರದಕ್ಷಿಣೆ ತೆಗೆದುಕೊಂಡು ಬರದೇ ಇದ್ದಲ್ಲಿ ಡೈವರ್ಸ ಕೊಡು ಹಾಗೂ 1ನೇ ಆರೋಪಿಗೆ ಮತ್ತೊಂದು ಮದುವೆ ಮಾಡಿಸುವುದಾಗಿ ನೀವು ಆಕೆಗೆ ಹೇಳುತ್ತಿದ್ದಿರಿ ಎಂದು ಪ್ರಾಸಾ 1 ಬಸವಣ್ಣೆವ್ವರವರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-3 : ದಿಃ 8-8-2016 ರಂದು ಮಧ್ಯಾಹ್ನ 12 ಗಂಟೆಗೆ ನೀವು 3 ಮತ್ತು 4ನೇ ಆರೋಪಿಗಳು ಆಕೆಯ ತಲೆಯ ಕೂದಲು ಹಿಡಿದು ಎಳೆದಾಡಿ ಬೈಯ್ದಿದ್ದು ನೀವು 2ನೇ ಆರೋಪಿ ಆಕೆಯನ್ನು ಒದ್ದಿರಿ ಆಗ ನೀವು 1ನೇ ಆರೋಪಿ ಆಕೆಯನ್ನು ಅವಾಚ್ಯ ಶಬ್ದಗಳಿಂದ ಬೈಯ್ದು ಕೊಡ್ಲಿ ತಂದು ನಿನ್ನನ್ನು ಮುಗಿಸಿಬಿಡುತ್ತೇನೆ ಎಂದು ಆಕೆಯನ್ನು ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದ್ದಲ್ಲದೇ ಜೀವ ಬೆದರಿಕೆ ಹಾಕಿದ್ದಿರಿ ಎಂದು ಪ್ರಾಸಾ 1 ರವರು ಮುಂದುವರಿದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-4 : ನೀವು 1 ನೇ ಆರೋಪಿ ಕೊಡ್ಲಿಯಿಂದ ನಿಮ್ಮ ಹೆಂಡತಿಯ ಮೇಲೆ ಹಲ್ಲೆ ಮಾಡಲು ಬಂದಿದ್ದು, ಆಕೆಗೆ ಬೀಳಬೇಕಾದ ಏಟು ಬಾಗಿಲಿಗೆ ಬಿದ್ದು ಸೀಳುಗೊಂಡಿತ್ತು ಎಂದು ಪ್ರಾಸಾ 1 ರವರು ಮುಂದುವರಿದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ನೇ ಆರೋಪಿ

ಪ್ರಶ್ನೆ-5 : ಆಕೆಗೆ ಕಿರುಕುಳ ಕೊಟ್ಟು ಹಲ್ಲೆ ಮಾಡಿ ಕೊಲೆ ಮಾಡಲು ಪ್ರಯತ್ನಪಟ್ಟು ಜೀವದ ಬೆದರಿಕೆ ಹಾಕಿದ ಕಾರಣ ನಿಮ್ಮಗಳ ವಿರುದ್ಧ ನಿಪಿ 1 ರೀತ್ಯ ದೂರು ಸಲ್ಲಿಸಿದ್ದಾಗಿ ಪ್ರಾಸಾ 1 ರವರು ಮುಂದುವರಿದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-6 : ಪೊಲೀಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ಫೋಟೋ ತೆಗೆದು ಕೊಡ್ಲಿ ಮತ್ತು ಬಾಗಿಲು ಚೂರುಗಳನ್ನು ಅಮಾನತ್ತು ಪಡಿಸಿಕೊಂಡಿದ್ದು, ಅವುಗಳು ಮುದ್ದೆಮಾಲು-1 ರಿಂದ 6 ಆಗಿರುತ್ತವೆ ಎಂದು ಗುರುತಿಸಿ ಪ್ರಾಸಾ 1 ರವರು ಮುಂದುವರಿದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-7 : ದಿಃ 9-8-2016 ರಂದು ಪೊಲೀಸರು ದೂರುದಾರರ ಮನೆಯ ಬಳಿ ಬಂದು ಪಂಚನಾಮೆ ಮಾಡಿ ನಿಪಿ 2 ಫೋಟೋ ತೆಗೆದಿದ್ದಲ್ಲದೇ ನಿಪಿ 3 ರೀತ್ಯ ಪಂಚನಾಮೆಯನ್ನು ಬೆಳಿಗ್ಗೆ 9-30 ವರೆಗೆ ಬರೆದು ಮುದ್ದೆಮಾಲು-1 ರಿಂದ 6 ಇವುಗಳನ್ನು ಅಮಾನತ್ತುಪಡಿಸಿಕೊಂಡಿದ್ದಾಗಿ ಪ್ರಾಸಾ 2 ಶರಣಪ್ಪರವರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-8 : ಮದುವೆಯಾದ ಪ್ರಾರಂಭದಲ್ಲಿ ಚಾಸಾ 1 ರವರನ್ನು ನೀವುಗಳು ಕೆಲವು ದಿನಗಳ ಕಾಲ ಚೆನ್ನಾಗಿ ನೋಡಿಕೊಂಡು ನಂತರ ಕಿರುಕುಳ ಕೊಡಲು ಪ್ರಾರಂಭಿಸಿದ್ದಿರಿ ಎಂದು ಪ್ರಾಸಾ 5 ಮಲ್ಲಪ್ಪರವರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-9 : ದಿಃ 8-8-2016 ರಂದು ಮಧ್ಯಾಹ್ನ 12 ಗಂಟೆಗೆ ನೀವುಗಳು ದೂರುದಾರರೊಂದಿಗೆ ಗಲಾಟೆ ಮಾಡಿ ಆಕೆಯ ಎಡಗೈನ್ನು ತಿರುಚಿ, ತಲೆ ಕೂದಲನ್ನು ಹಿಡಿದು ಎಳೆದಾಡಿ ನಿನ್ನನ್ನು ಸಾಯಿಸುತ್ತೇನೆ ಎಂದು ಕೊಡ್ಲಿಯಿಂದ ನೀವು 1 ನೇ ಆರೋಪಿ ಹಲ್ಲೆ ಮಾಡಲು ಪ್ರಯತ್ನಿಸಿದಾಗ ಆ ಏಟು ಬಾಗಿಲಿಗೆ ತಾಗಿ ಒಡೆಯಿತು ಆಗ ತಾನು ಜಗಳ ಬಿಡಿಸಿದೆ ಎಂದು ಪ್ರಾಸಾ 5 ರವರು ಮುಂದುವರಿದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ

ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-10 : ಮದುವೆಯಾದ ಪ್ರಾರಂಭದಲ್ಲಿ ಚಾಸಾ 1 ರವರನ್ನು ನೀವುಗಳು ಕೆಲವು ದಿನಗಳ ಕಾಲ ಚೆನ್ನಾಗಿ ನೋಡಿಕೊಂಡು ನಂತರ ಕಿರುಕುಳ ಕೊಡಲು ಪ್ರಾರಂಭಿಸಿ ದಿಃ 8-8-2016 ರಂದು ಆಕೆಯನ್ನು ಕೊಡ್ಲಿಯಿಂದ ಕೊಲೆ ಹೊಡೆದು ಕೊಲೆ ಮಾಡಲು ಪ್ರಯತ್ನಪಟ್ಟು ಆಕೆಯ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿದ ವಿಚಾರ ತಿಳಿದ ನಂತರ ಅವರ ಅಕ್ಕನನ್ನು ಠಾಣೆಗೆ ಕರೆದುಕೊಂಡು ಹೋಗಿ ದೂರು ಕೊಡಿಸಿದ್ದಾಗಿ ಪ್ರಾಸಾ 6 ಬಸವರಾಜರವರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-11 : ದಿಃ 9-8-2016 ರಂದು ಬೆಳಗಿನ ಜಾವ 1-36 ಗಂಟೆಗೆ ಹಲ್ಲೆಯಿಂದ ಗಾಯಗೊಂಡ ಇತಿಹಾಸದಲ್ಲಿ ಕುಷ್ಟಗಿ ಸರ್ಕಾರಿ ಆಸ್ಪತ್ರೆಗೆ ಬಂದ ಗಾಯಾಳು ಬಸವಣ್ಣೆಮ್ಮ ಈಕೆಯನ್ನು ಪರೀಕ್ಷಿಸಿದಾಗ ಎಡಮೊಣಕೈ ಬಳಿ ತೆರಚಿದ ಗಾಯ ಕಂಡು ಬಂದಿದ್ದು, ಅದು ಸಾಮಾನ್ಯ ಸ್ವರೂಪದ ಗಾಯ ಆಗಿದ್ದು, ಹಲ್ಲೆಯಿಂದ ಸಂಭವಿಸಬಹುದು ಎಂದು ನಿಪಿ 6 ಗಾಯದ ಪ್ರಮಾಣಪತ್ರ ನೀಡಿ ಪ್ರಾಸಾ 7 ಡಾಃವಿರುಪಾಕ್ಷಪ್ಪ ಅಳ್ಳಳ್ಳಿರವರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-12 : ದಿಃ 8-8-2016 ರಂದು ದೂರುದಾರರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ನಿಮ್ಮ ವಿರುದ್ಧ ನಿಪಿ 7 ಪ್ರ ವ ವರದಿ ದಾಖಲು ಮಾಡಿಕೊಂಡಿದ್ದು, ಮರುದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ನಿಪಿ 3 ಪಂಚನಾಮೆ ತಯಾರಿಸಿ ಮುದ್ದೆಮಾಲು-1 ರಿಂದ 6 ಇವುಗಳನ್ನು ಅಮಾನತ್ತುಪಡಿಸಿಕೊಂಡು ಫೋಟೋಗಳನ್ನು ತೆಗೆದೆ ಎಂದು ಪ್ರಾಸಾ 8 ಸಂಗಮೇಶರವರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-13 : ತನಿಖೆಯನ್ನು ಮುಂದುವರಿಸಿ ಸಾಕ್ಷಿದಾರರನ್ನು ವಿಚಾರಿಸಿ ಹೇಳಿಕೆಗಳನ್ನು ಮಾಡಿಕೊಂಡು ಗಾಯದ ಪ್ರಮಾಣಪತ್ರವನ್ನು ಸ್ವೀಕರಿಸಿ ನಿಮ್ಮ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾಗಿ ಪ್ರಾಸಾ 8 ರವರು ಮುಂದುವರಿದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : 1 ರಿಂದ 4

ಪ್ರಶ್ನೆ-14 : ದಿಃ 27-9-2016 ರಂದು ಸಂಜೆ 7-20 ಗಂಟೆಗೆ ನಿಮ್ಮನ್ನು ಗುಡ್ಡದ ದೇವಲಾಪುರ ಕ್ರಾಸ ಬಳಿ ವಶಕ್ಕೆ ಪಡೆದು ಠಾಣೆಗೆ 8-00 ಗಂಟೆಗೆ ಕರೆದುಕೊಂಡು ಬಂದು ದಸ್ತಗಿರಿ ಕ್ರಮ ಜರುಗಿಸಿ ನಂತರ ನ್ಯಾಯಾಲಯದ

ಮುಂದೆ ಹಾಜರುಪಡಿಸಲು ಕ್ರಮ ತೆಗೆದುಕೊಂಡಿದ್ದಾಗಿ ನ್ಯಾಯಾಲಯದಲ್ಲಿ ನಿಮ್ಮನ್ನು ಗುರುತಿಸಿ ಪ್ರಾಸಾ **9** ಶಾಂತಪ್ಪರವರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : **1** ನೇ ಆರೋಪಿ

ಪ್ರಶ್ನೆ**-15** : ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ :

(ಬಹಿರಂಗ ನ್ಯಾಯಾಲಯದಲ್ಲಿ ಆರೋಪಿತರು ಕೊಟ್ಟ ಉತ್ತರಗಳನ್ನು ದಾಖಲು ಮಾಡಿಕೊಳ್ಳಲಾಗಿರುತ್ತದೆ.)

ಸ್ಥಳ : ಕೊಪ್ಪಳ.

ದಿನಾಂಕ: **18-06-2026.**

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.